Doc-384
T.P-2

(1)

51st Year of Publication ★ SATYAVADI Daily, MYSORE 4

Reg No B G 155

ಶುಭ ಕೋರ್ಮನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

ಸ್ವಾತಂತ್ರ್ಯೋತ್ಸವ
ಸಂಚಿಕೆ
15-8-1968

ಸ್ಥಾಪಕರು : ಅರಸನಸಿ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಹಿಂಸೆ ಮತ್ತು ಆರಿಸಿಕೆ ಅಗತ್ಯ

ಸತ್ಯವಾದಿ " ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಸಪ್ತಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನೀವು ನಾಲ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ತಿಪರಲ್ಲಿ ಸಾಪ್-ಸೀದಾ ಒಂದೇ ವ್ಯಾಪಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಅಷ್ಟೆ.

ಸ್ವಾತಂತ್ರ್ಯದಿನೋತ್ಸವ ಸಂಪರ್ಭದಲ್ಲಿ ರಾಷ್ಟ್ರಪತಿಗಳ ಸಂದೇಶ

★

ನಮ್ಮ 21 ನೇ ಸ್ವಾತಂತ್ರ್ಯ ದಿನೋತ್ಸವದ ಮುನ್ನಾದಿನ ನಿಮ್ಮನ್ನು ಅಭಿನಂದಿಸಲು ಉತ್ತಮ ಭವಿತವ್ಯಕ್ಕಾಗಿ ನನ್ನ ಹಾರ್ದಿಕ ಶುಭಾಶಯಗಳನ್ನು ತಿಳಿಸಲು ನನಗೆ ಅತ್ಯಂತ ಆನಂದವಾಗುತ್ತದೆ.

ಈ ಹಿಂದಿನ ಸ್ವಾತಂತ್ರ್ಯದಿನೋತ್ಸವದ ಮುನ್ನಾದಿನ ನಾವು ನಿರ್ಮಾಂದಿಗೆ ಮಾತನಾಡಿದೆ. ಅಂದಿನಿಂದ ಈ ವರಗಿದ ಅವಧಿಯಲ್ಲಿ, ನಾವು ಕ್ಷಾನು ಹಾಗೂ ಉಪವಾಸದ ಬದುಕಿನ ಕಾರ್ಯತ್ತಲಿನಿಂದ ಹೊತಗೆ ಬಂದಿದ್ದೇವೆ. ನಮ್ಮ ದೇಶದ ಅನೇಕ ರಾಜ್ಯಗಳಲ್ಲಿ ವಿಶೇಷವಾಗಿ ಬಿಹಾರ್ ಮತ್ತು ಉತ್ತರ ಪ್ರದೇಶಗಳಲ್ಲಿ ಕ್ಷಾಮ ಹಾಗೂ ಅಭಾವ ಪರಿಸ್ಥಿತಿ ಏರ್ಪಟ್ಟು ಬಹಳ ಕಷ್ಟ ನಷ್ಟಗಳನ್ನು ಎದುರಿಸಬೇಕಾಯಿತು.

ಈ ವರ್ಷ ನಾವು 9 ಕೋಟಿ 50 ಲಕ್ಷ ಟನ್‌ಗಳಿಗಿಂತಲೂ ಹೆಚ್ಚು ಆಹಾರಧಾನ್ಯಗಳನ್ನು ಉತ್ಪಾದಿಸಿದ್ದೇವೆ. ಬೇಸಾಯ ಉತ್ಪಾದನೆಯಲ್ಲಿ ಇದು ಒಂದು ಹೊಸ ಡಾಖಲೆಯಾಗಿದೆ.

ಈ ವರ್ಷ ನಮ್ಮ ದೇಶದಲ್ಲಿ ಆಗಿರುವ ಸಮೃದ್ಧವಾದ ಬೇಸಾಯ ಉತ್ಪಾದನೆಯಿಂದ ನಾವು ಮೈ ಮರೆಯಬಾರದೆಂದೂ ಹಿಂದಿನ ಕಷ್ಟದ ದಿನಗಳನ್ನು ಮರೆಯಬಾರದೆಂದೂ ನಾನು ಕಳಿಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಕೈಗಾರಿಕಾ ಉತ್ಪಾದನೆಯಲ್ಲಿ ವೈವಿಧ್ಯತೆಯನ್ನು ಸಾಧಿಸಿದ್ದೇವೆ. ಇಂದು ನಾವು ನಮ್ಮ ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಬೇಕಾಗುವ ಬಹುತೇಕ ಯಂತ್ರಗಳನ್ನೂ ಯಂತ್ರೋಪಕರಣಗಳನ್ನೂ ನಮ್ಮ ದೇಶದಲ್ಲಿಯೇ ತಯಾರಿಸುತ್ತಿದ್ದೇವೆ.

ಬೇಸಾಯ ಹಾಗೂ ಕೈಗಾರಿಕೆಗಳಲ್ಲಿ ಸಾಧಿಸಲಾಗಿರುವ ಬೃಹತ್ ಪ್ರಗತಿಯು ಬಡತನದ ನಿವಾರಣೆಯ ಮೇಲೆ ಭಾವುದೇ ಪ್ರಭಾವ ಬೀರಿಲ್ಲ.

ವಿಶ್ವದ ಒಟ್ಟು ಭೂಖಾಗದ ಶೇ 2.4 ರಷ್ಟು ಪ್ರದೇಶದಲ್ಲಿ ಒಟ್ಟು ಜನಸಂಖ್ಯೆಯ ಶೇ. 14 ರಷ್ಟು ಜನ ಭಾರತದಲ್ಲಿದ್ದಾರೆ. ವಿವಿಧ ಭಾಷೆಯ ಮಾತನಾಡುವ ಕೋಟ್ಯಾಂತರ ಜನರು ಪೆಡರಾಲು ಪ್ರಭುತ್ವದಲ್ಲಿ ಒಂದೇ ರಾಜಕೀಯ ವ್ಯವಸ್ಥೆಗೆ ಒಳಪಟ್ಟಿದ್ದಾರೆ. ಇಂತಹ ವ್ಯವಸ್ಥೆ ವಿಶ್ವದಲ್ಲಿ ಬೇರೆಲ್ಲಿಯೂ ಕಂಡುಬರಲಾರದು.

ಭಾಷೆ, ಧರ್ಮ ಹಾಗೂ ಸಂಸ್ಕೃತಿಗಳ ವೈವಿಧ್ಯತೆಯಿಂದ ಸಂಪದ್ಭರಿತವಾದ, ಸಮರಸವುಳ್ಳ ಭಾರತೀಯ ಪರಂಪರೆಯನ್ನು ನಾವು ನಿರ್ಮಿಸುತ್ತಿದ್ದೇವೆ.

ತೀವ್ರಗತಿಯಲ್ಲಿ ಆರ್ಥಿಕ ಅಭ್ಯುದಯ ಸಾಧಿಸಲು ಈಗ ನಾವು ಯತ್ನಿಸುತ್ತಿದ್ದೇವೆ

ದೇಶಾಭಿಮಾನವೇ ನಮ್ಮ ಮುನ್ನಡೆಗೆ ಇಂದು ಅಗತ್ಯವಾಗಿರುವ ಚೈತನ್ಯವನ್ನು ನೀಡಬಲ್ಲದು ; ನಾವು ಎಲ್ಲಾ ಪ್ರತ್ಯೇಕತಾ ಪ್ರವೃತ್ತಿಗಳನ್ನು ವಿರೋಧಿಸಬೇಕಲ್ಲದೇ, ಆತ್ಮದ ಸ್ವರೂಪವನ್ನು ಅರಿತುಕೊಳ್ಳಲು ಹಾಗೂ ಆತ್ಮವಿಶ್ವಾಸವನ್ನು ಸಬಲಗೊಳಿಸಲು ರಾಷ್ಟ್ರಕ್ಕೆ ನೆರವಾಗಬೇಕು.

ನಮ್ಮ ಘನವಾದ ಪರಂಪರೆಯಂತೆ ನಾವು ನಡೆದುಕೊಂಡರೆ ಭಾರತದ ರಾಷ್ಟ್ರೀಯತೆಯ ನಿಜವಾದ ಅಂತಾರಾಷ್ಟ್ರೀಯತೆಯ ಬೆಳವಣಿಗೆಗೆ ಸಹಾಯಕವಾಗಬಲ್ಲದು.

ಮುಂದಿನ ಅಕ್ಟೋಬರು ತಿಂಗಳಲ್ಲಿ ನಾವು ಗಾಂಧೀಜಿಯವರ ಜನ್ಮಶತಾಬ್ದಿ ಉತ್ಸವವನ್ನು ಆಚರಿಸಲಿದ್ದೇವೆ.

ನಮ್ಮ ರಾಷ್ಟ್ರೀಯ ಜೀವನದ ಎಲ್ಲಾ ಅಂಗಗಳಲ್ಲಿ ನೈತಿಕ ಮಟ್ಟ ಕಡಿಮೆಯಾಗುತ್ತಿರುವುದನ್ನು ಕಾಣುತ್ತಿದೆ.

ನಮ್ಮ ಸಾರ್ವಜನಿಕ ಜೀವನದಲ್ಲಿ ಶಿಸ್ತನ್ನು ಕಾಪಾಡಿಕೊಂಡು ಹೋಗಬೇಕಾದರೆ ಅಹಿಂಸೆ, ಸಹಿಷ್ಣುತೆ ಮತ್ತು ಪರಸ್ಪರ ಆರಿತುಕೊಳ್ಳುವ ಗುಣಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

ಖಂಡನಾ ಸೂಚನೆ

ನವದೆಹಲಿ— ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯ ಮತ್ತು ಪ್ರಧಾನಿ ಇಂದಿರಾರವರ ಮೇಲೆ ಎಸ್ಸೆಸ್ಪಿ ಸದಸ್ಯ ಶ್ರೀ ಮಧು ಲಿಮೆಯವರು ತಂದಿರುವ ಖಂಡನಾ ಸೂಚನೆಯು ಲೋಕಸಭೆಯಲ್ಲಿ ಸೋಮವಾರ ಚರ್ಚಿಸಲಾಗುವುದು.

ಮುಷ್ಕರ

ನವದೆಹಲಿ— ವಿದ್ಯಾರ್ಥಿಗಳ ಕೇಳಿಕೆಯನ್ನು ಒತ್ತಾಯಪಡಿಸಲು ಡೆಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಘದ ಕರೆಯಂತೆ ನಿನ್ನೆ ವಿದ್ಯಾರ್ಥಿಗಳು ಮುಷ್ಕರ ನಡೆಸಿದರು.

ಕ್ರೀಡೆಗಳಿಗೆ ನೆರವು

ಮೈಸೂರು— ಪೌರಸಭಾಧ್ಯಕ್ಷ ಶ್ರೀ ಬಿ ಸಿ ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಭಾಧಿವೇಶನದಲ್ಲಿ ಮೈಸೂರು ಜಿಲ್ಲಾ ಮತ್ತು ವಿಭಾಗ ದಸರಾ ಕ್ರೀಡೆಗಳಿಗೆ ರೂ. 250 ಮತ್ತು ರೂ. 1000 ಮಂಜೂರಾಯಿತು.

ಸಂಸ್ಕೃತಾಭಿವೃದ್ಧಿ

ನವದೆಹಲಿ— ಸಂಸ್ಕೃತದ ಅಭಿವೃದ್ಧಿಗೆ ಪಾರ್ಲಿಮೆಂಟ್ಟು ಸದಸ್ಯರ ಹೊಸ ಸಂಸ್ಥೆ ಸ್ಥಾಪನೆಯಾಯಿತು.

ಸರಿಯಾದ ಕೆಲಸ

ಬೆಂಗಳೂರು— ತುಮಕೂರು ಗ್ರಾಮಗಳ ಭೌಗಗಳು ಮುಳುಗಡೆಯಾಗುವುದನ್ನು ತಪ್ಪಿಸಲು ಮೇಲಿನ ಪೆನ್ನಾರು ನಿಜವ್ಯಾಯರಿನ ಮಟ್ಟ ಇಳಿಸಲು ಆಂಧ್ರ ಪ್ರದೇಶ ಒಪ್ಪಿರುವುದಾಗಿ ಗೊತ್ತಾಗಿದೆ.

ರಾಜ್ಯದ ನಾಲ್ಕನೇ ಯೋಜನೆಗೆ

ಬೆಂಗಳೂರು— ರಾಜ್ಯದ ಯೋಜನಾ ಮಂಡಲಿ ತನ್ನ ಮೂರು ದಿನಗಳ ಸಮಾಲೋಚನೆಯ ನಂತರ ರಾಜ್ಯದ ನಾಲ್ಕನೇ ಯೋಜನೆಯ ಗಾತ್ರವನ್ನು ತಾತ್ಕಾಲಿಕವಾಗಿ ರೂ. 440 ಕೋಟಿ ಆಗಿರಬೇಕೆಂದು ನಿಗದಿ ಮಾಡಿದೆ.

★

ಚೀನಾ–ಪಾಕ್‌ನಿಂದ ಗಂಡಾಂತರ

ನವದೆಹಲಿ— ಚೀನಾ ಪಾಕಿಸ್ತಾನಗಳೆಡರಿಂದಲೂ ಭಾರತಕ್ಕೆ ಗಂಡಾಂತರವಿದೆ ಎಂದು ರಕ್ಷಣಾ ಮಂತ್ರಿ ಸ್ವರ್ಣಸಿಂಗರು ಹೇಳಿದ್ದಾರೆ.

●

ನಾಗಾಲ್ಯಾಂಡು

ನವದೆಹಲಿ— ನಾಗಾಲ್ಯಾಂಡು ಭಾರತದಿಂದ ವಿಭಜಿಸಲ್ಪಟ್ಟ ಪ್ರದೇಶವೆಂಬುದೇ ದಿಮೇದಿಕಾದ ನಿಲುವೆಂದು ರಾಯಭಾರಿ ಚೆಸ್ಟರ್ ಬೌಲ್ಸರು ಹೇಳಿದರು.

★

ಪೋಲೀಸು ಅಧಿಕಾರಿಗಳಿಗೆ ಪ್ರಶಸ್ತಿ

ದೆಹಲಿ— ಐದು ಮಂದಿ ಪೋಲೀಸು ಅಧಿಕಾರಿಗಳಿಗೆ ಪೋಲೀಸು ಮತ್ತು ಅಗ್ನಿ ಶಾಮಕ ಸೇವಾ ಪದಕಗಳನ್ನೂ ಇತರ 119 ಮಂದಿ ಪೋಲೀಸು ಅಧಿಕಾರಿಗಳಿಗೆ ಪೋಲೀಸು ಪದಕಗಳನ್ನೂ ರಾಷ್ಟ್ರಪತಿಗಳು ನೀಡಿ ಗೌರವಿಸಿದ್ದಾರೆ.

★

ಪಾಕಿಸ್ತಾನದಲ್ಲಿ

ಕರಾಚಿ— ಭಾರತವು ಪಾಕಿಸ್ತಾನದೊಡನೆಯ ತನ್ನ ವಿವಾದಗಳನ್ನು ಬಗೆಹರಿಸಿಕೊಳ್ಳಲು ಮುಂದಾಗಬೇಕೆಂದು ಅಧ್ಯಕ್ಷ ಅಯೂಬರು ಪಾಕಿಸ್ತಾನ ಸ್ವತಂತ್ರ ದಿನೋತ್ಸವ ಸಂದರ್ಭದಲ್ಲಿ ಕರೆ ಇತ್ತಿದ್ದಾರೆ. ಕಾಶ್ಮೀರ ಜನತೆಗೆ ಸ್ವಯಂ ನಿರ್ಣಯಾಧಿಕಾರದ ಹಕ್ಕಿನ ಬೇಡಿಕೆಯನ್ನೂ ಕೂಡ ಪ್ರಸ್ತಾಪಿಸಿದರು.

●

ಗಾಂಧೀಜಿಯರ ನುಡಿ

ಸತ್ಯಕ್ಕೆ ಸಂಚಕಾರ ಬರುವದಾದರೆ ನನಗೆ ಸ್ವರಾಜ್ಯ ಬೇಡ ; ಅಹಿಂಸೆಗೆ ಅಪ್ಪೇಹುಂಟಾಗುವುದಾದರೆ ಇದೋ ಹಿಮಾಚಲದ ಗರ್ಭಾಂತರಾಳದ ಗೊಂಡಾರಣ್ಯದ ಪಾಲಾಗುತ್ತೇನೆ.

ಸ್ವತಂತ್ರ ಭಾರತದಲ್ಲಿ ವ್ಯಕ್ತಿಯು ಹೆಚ್ಚು ಹೆಚ್ಚಾಗಿ ಆಳಬೇಕು : ಪ್ರಭುತ್ವವು ಕನಿಷ್ಠಾಂಶ ಆಳಬೇಕು : ವ್ಯಕ್ತಿಯ ಆಳಿಕೆಗೆ ಧರ್ಮವೇ ಮೂಲಾಧಾರವಾಗಿರಬೇಕು.

ಸತ್ಯಮೇವ ಜಯತೆ, ಎಂಬುದರಲ್ಲಿ ನನಗಿರುವ ನಂಬಿಕೆಯನ್ನು ಸ್ಥಾಪಿಸಬೇಕು.

ಮುಖ್ಯ ಮಂತ್ರಿಗಳಲ್ಲಿ ಮನವಿ

ಬೆಂಗಳೂರು ಡೈರಿಯಲ್ಲಿ ತೆಗೆದುಕೊಳ್ಳಲ್ಪಟ್ಟಿರುವ 65 ಮಂದಿ ತಮಗೆ ಉದ್ಯೋಗ ಕಲ್ಪಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿರುವರು.

★

ಮಾಂಸದ ಮಾರಾಟವಿಲ್ಲ

ಬೆಂಗಳೂರು— ಕಾರ್ಪೊರೇಷನ್ನಿನ ಮಾಂಸದ ಅಂಗಡಿಗಳಲ್ಲಿ ತಾ|| 16 ರಂದು ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಾಂಸದ ಮಾರಾಟವಿಲ್ಲವೆಂದು ಪ್ರಕಟವಾಗಿದೆ.

●

ಸ್ಥಾನಬದ್ಧತೆಯಿಂದ ಬಿಡುಗಡೆ

ಬೆಂಗಳೂರು— ಸ್ಥಾನಬದ್ಧತೆಯಲ್ಲಿರುವ ನಿವೃತ್ತ ನ್ಯಾಯಾಧೀಶರಾದ ಅಬ್ದುಲ್ ರಹೀಂ ಅಹಮದ್ದರನ್ನು ಅವರು ಒಂದು ಸಾವಿರ ರೂ. ಬಾಂಡನ್ನು ಮತ್ತು ಅಷ್ಟೇ ಮೌಲ್ಯದ ಇಬ್ಬರು ಜಾಮೀನುಗಳನ್ನೂ ಕೊಡಬೇಕೆಂದು ಸರಕಾರ ಆಜ್ಞೆ ಮಾಡಿರುವದಾಗಿ ತಿಳಿಯಬಂದಿದೆ.

★

ಕಾಸ್ಮೋಸಿಯಾ ಸಮ್ಮೇಳನ

ನವದೆಹಲಿ— ಹನ್ನೆರಡು ದಿನಗಳವರೆಗೆ ಕಾಸ್ಮೋಸಿಯಾ ಸಮ್ಮೇಳನ ನಡೆಯುತ್ತಲಿದೆ : ವಿವಿಧ ದೇಶಗಳ ಪ್ರತಿನಿಧಿಗಳು ಬಂದಿದ್ದಾರೆ ; ಏಷ್ಯಾರಾಷ್ಟ್ರಗಳ ಅಭಿವೃದ್ಧಿಗೆ ವಿಜ್ಞಾನದ ಬಳಕೆಯ ಬಗ್ಗೆ ಸಮ್ಮೇಳನ ಚರ್ಚಿಸುವುದು.

★

ಭಾವೈಗೆ ರಾಜ್ಯಗಳ ದಾನ

ಕಾನ್ಪುರ— ಮುಂದಿನ ವರ್ಷ ಅಕ್ಟೋಬರು 2 ರಂದು ಮಹಾತ್ಮಾ ಗಾಂಧೀಜಿ ಶತಮಾನೋತ್ಸವದಂದು ಆಚಾರ್ಯ ಭಾವೇರಿಗೆ ತಮಿಳುನಾಡು ಮತ್ತು ಉತ್ತರ ಪ್ರದೇಶ ರಾಜ್ಯಗಳು ದಾನ ಮಾಡಲಾಗುತ್ತವೆ.

★

ಕನೆಡಾ ನೆರವು

ಒಟ್ಟಾವಾ— ಕನೆಡಾವು ಭಾರತ ಮತ್ತು ಪಾಕಿಸ್ತಾನಗಳಲ್ಲಿಯ ಪ್ರವಾಹ ಸಂಕಷ್ಟದ ಸಹಾಯಕ್ಕಾಗಿ 30000 ಡಾಲರುಗಳನ್ನು ಕೊಡಲಿದೆ.

★

ಚಿತ್ರ ನಿರ್ಮಾಪಕರಿಗೆ ಸನ್ಮಾನ

ಬೆಂಗಳೂರು— ನಕ್ಕರಿ ಅದೇ ಸ್ವರ್ಗ, ಮತ್ತು ಸಂಧ್ಯಾರಾಗ ಚಿತ್ರಗಳ ನಿರ್ಮಾಪಕ ಮತ್ತು ನಿರ್ದೇಶಕರದ್ದು ತಾ|| 18 ರಂದು ಸರ್ಕಾರಿ ಸನ್ಮಾನ ನಿಗದಿಯಾಗಿದೆ.

ಪಾನನಿರೋಧ ಜಾರಿಗೆ ತರುವ ರಾಜ್ಯಗಳ ಬಗ್ಗೆ ಕೇಂದ್ರದ ನೆರವು ಮುಂದಿನ 5 ವರ್ಷಗಳಿಗೆ ರೂ. 315 ಕೋಟಿ ಎಂದು ನವದೆಹಲಿ ವಾರ್ತೆ ತಿಳಿಸುತ್ತದೆ.

ನವದೆಹಲಿ— ಆಂತರರಾಜ್ಯ ನೀರಿನವ್ಯಾಜ್ಯಗಳಲ್ಲಿ ಮೂರು ಮಂದಿಯ ನ್ಯಾಯಾಂಗ ಮಂಡಲಿ ರಚನೆಯ ಮಸೂದೆ ರಾಜ್ಯಸಭೆಯಲ್ಲಿ ಮಂಜೂರಾಯಿತು.

ಪಾಕೇಸ್ತಾನವು ರಕ್ಷಣಾ ಸಮಿತಿಯಲ್ಲಿಸೆಪ್ಟೆಂಬರಿನಲ್ಲಿ ಕಾಶ್ಮೀರ ವಿಚಾರವನ್ನು ಎತ್ತುವಂತಿದೆಯೆಂದೂ, ಪ್ರಬಲ ರಾಷ್ಟ್ರದೇಶಗಳನ್ನೆರವಿಗೆ ಪ್ರೇರೇಪಿಸುತ್ತಿದೆಯೆಂದೂ ಹೇಳಲಾಗಿದೆ.

ನೆಹರು ಮತ್ತು ಇಂದಿರಾ

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 1.

DOC-355
T. P.-2

ಗಾಂಧೀಜಿ ದೃಷ್ಟಿಯಲ್ಲಿ— ಮಾನವ ಜನಾಂಗದ ಏಳಿಗೆಯ ಮಾರ್ಗ

ಹಿಂದು–ಮುಸ್ಲಿಂ ಐಕ್ಯತೆಗೆ ಹೊರನೋಟಕ್ಕೆ ತೋರುವುದಕ್ಕಿಂತ ಹೆಚ್ಚಿನ ಅರ್ಥವಿದೆ. ಈ ಐಕ್ಯತೆ ಎಂದರೆ ಕೇವಲ ಹಿಂದೂಗಳು ಮತ್ತು ಮುಸಲ್ಮಾನರ ಐಕ್ಯತೆಯೆಂದಲ್ಲ. ಭಾರತವೇ ತಮ್ಮ ಮನೆ ಎಂದು ನಂಬಿರುವ ಎಲ್ಲಾ ಜನರ ಐಕ್ಯತೆ. ಅವರ ಧರ್ಮ ಯಾವುದೇ ಇರಲಿ ಅದು ಮುಖ್ಯವಲ್ಲ.

ಪ್ರೀತಿ-ಸ್ನೇಹದ ಆಧಾರ. ಅದು ಧರ್ಮದ ಆಧಾರವೂ ಹೌದು. ಪ್ರೀತಿಯ ಬಲದಿಂದ ಮುಸ್ಲಿಂ ಬಂಧುಗಳ ಸ್ನೇಹ ಸಂಪಾದಿಸುವುದೇ ನನ್ನ ಗುರಿ. ಒಂದು ಸಮಾಜದಲ್ಲಾದರೂ ಪ್ರೀತಿಯ ಭಾವನೆ ಇರಬೇಕು ; ಆಗ ಐಕ್ಯತೆ ನಮ್ಮ ರಾಷ್ಟ್ರೀಯ ಜೀವನದ ಅಂಗವಾಗುತ್ತದೆ.

ಪ್ರತಿಯೊಬ್ಬರೂ ಪರಸ್ಪರ ಧರ್ಮವನ್ನು ಗೌರವಿಸಬೇಕು : ಅಂತರಂಗದಲ್ಲೂ ಸದ ಒಬ್ಬರು ಮತ್ತೊಬ್ಬರಿಗೆ ಸೇಡು ಬಗೆಯಕೂಡದು ; ಒಬ್ಬರು ಇನ್ನೊಬ್ಬರ ಧರ್ಮವನ್ನು ನಿಂದಿಸಬಾರದು.

ಪರಧರ್ಮ ದೂಷಣೆಯಾಡುವದು, ಸಂಯಮ ತಪ್ಪಿ ಮಾತಾಡುವುದು, ಅಸತ್ಯ ನುಡಿಯುವುದು, ಮುಗ್ಧ ಜನರನ್ನು ವಂಚಿಸುವದು, ದೇವಾಲಯಗಳನ್ನು ಅಥವಾ ಮನೆಗಳನ್ನು ಭಗ್ನಗೊಳಿಸುವುದು, ದೇವರ ಅಸ್ತಿತ್ವವನ್ನೇ ಅಲ್ಲಗಳೆದಂತೆ.

ಮತೀಯ ಪ್ರಕ್ಷೋಭ ನಿವಾರಣೆಗೆ ಒಂದೇ ಒಂದುಉಪಾಯವಿದೆ; ಪ್ರತಿಯೊಬ್ಬನು ತನ್ನ ಧರ್ಮದ ತತ್ವಗಳಂತೆ ನಡೆಯಬೇಕು ; ಇತರ ಧರ್ಮಗಳ ಬಗ್ಗೆ, ಇತರ ಧರ್ಮಾನುಯಾಯಿಗಳ ಬಗ್ಗೆ, ಗೌರವ ಭಾವನೆಯುಳ್ಳವನಾಗಬೇಕು , ಇದೇ ಸಮಸ್ಯೆಯ ಪರಿಹಾರಕ್ಕೆ ನಾನು ಸೂಚಿಸುವ ಮಾರ್ಗ.

ಸಕಲ ಜೀವಿಗಳಿಗೆ ಲೇಸು ಬಯಸುವದೇ ನನ್ನ ದೇಶಾಭಿಮಾನದ ತಿರುಳು ನನ್ನ ದೃಷ್ಟಿಯಲ್ಲಿ ಬಂಧುತ್ವವೆಂದರೆ ಕೇವಲ ಮಾನವ ಜನಾಂಗದ ಬಂಧುತ್ವ ಮಾತ್ರವಲ್ಲ, ಸಕಲ ಜೀವಿಗಳ ಬಂಧುತ್ವವಾಗಿದೆ. ಒಬ್ಬನೇ ದೇವನು ನಮ್ಮನ್ನು ಸೃಷ್ಟಿಸಿದ ; ಈ ಪ್ರಪಂಚದ ಸಕಲ ಪ್ರಾಣಿಗಳೂ, ಎಲ್ಲಾ ಒಂದೇ ಎಂದು ನನ್ನ ಭಾವನೆ.

ವ್ಯಕ್ತಿ ಎಲ್ಲ ಕೆಲಸಕಾರ್ಯಗಳನ್ನೂ ತಾನೊಬ್ಬನೇ ನಿರ್ವಹಿಸಲಾರ. ಇಂತಹ ಸಂದರ್ಭಗಳಲ್ಲಿ ಅವನು ತನ್ನ ಕುಟುಂಬದ ಜನರ ನೆರವು ಪಡೆಯುತ್ತಾನೆ. ತನ್ನ ಕುಟುಂಬದ ನೆರವು ಪಡೆಯುವ ವ್ಯಕ್ತಿ ತನ್ನ ನೆರೆಹೊರೆಯವರ ನೆರವು ಏಕೆ ಪಡೆಯಲಾರ ? ಹಾಗೆ ಪಡೆಯುವಿದ್ದರೆ ' ಮಾನವ ಕುಲವೇ ತನ್ನ ಕುಟುಂಬ " ಎಂಬ ಮಾತಿಗೆ ಅರ್ಥವೇನು ?

Quality Printing — Neat Binding

Lakshminarasimha Press

Sivarampet, Mysore

ಅಶೋಕ ಪಬ್ಲಿಸಿಟೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳಿಗಾಗಿ ಕರೆಯಿರಿ

SHAKTI SUDHA

A Superb Tonic

ಪುಡ್‌ಲಾಂಡ್ 9-8-68 ರಿಂದ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ —

= ಫಪ್ಪಿ =

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ,
ಮುಕ್ರಿ, ಆಗಾ ಮುಂತಾದವರು

ಸಂಗೀತ —
ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— ಜನವರಿಯ 6 ನೇ ವಾರ

ಚಿತ್ತಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana,

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯ ಜಗದ್ಗುರು ಮಹಾಸನ್ನಿವೇಶಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸನ್ನಿವೇಶಗಳವರು ಉದಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪರಿಣಿತಿಯ, ಶಾಖಾಹಾರ, ಪಶುವೈದ್ಯ, ಜಾತಿಗಳ ವಿಶೇಷ ಪ್ರಚಾರ ವಾರಪತ್ರಿಕೆ ; ವಾರ್ಷಿಕ ಚಂದಾ 50 ನ್ಯೆಪೈ

— ಗೋರಕ್ಷಣೆ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ದಯಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳಿದಿರುವವರು ಇವರಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎಸ ವಿಶ್ವನಾಥ್ ಜಯನಗರ, ಬೆಂಗಳೂರು
ಶ್ರೀ ಬಿ ಜೆ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಆಸಂಕನಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ ಹೊಂಗನೂರು
ಗೋರಕ್ಷಣ ಆಫೀಸು ಸತ್ಯವಾದಿಸೈಕಲ್ ಚಾವಡಿಂಡಪುರಂ ಮೈಸೂರು 4
ವಿನಾಶನ್— ಗೋರಕ್ಷಣ ಆಫೀಸು 1067 ಚಾವಡಿಂಡಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮಾಸ್ಯ ಪರಿಣಿತಿಯಾ ಕಾರ್ಯಗಳು ಹೆಚ್ಚಿಗಿ ನಡೆಯಲಿ

Edited, Printed & Published by Dharmaprachara Niratha M S Krishna Rao (Proprietor) at the Satyavadi Press Chamarajapuram, Mysore-4

ನಿಮ್ಮ ನೆಚ್ಚಿನ •••
ಮೈಸೂರು
ಸಂದಲ
ಸಾಬೂನು
ಈಗ ಹೊಸ ರೂಪದಲ್ಲಿ
ಬಂದಿದೆ.

ಅತ್ಯಾಧುನಿಕ ಸ್ವಯಂಚಾಲಿತ
ವ್ಯಾಕುಮ್' ಸೋಪ್' ಪ್ಲಾಂಟ್'

ಈ ಸಾಬೂನಿಗೆ
ಮೊದಲಿನ
ಗೋಲಾಕಾರದ
ಬದಲು
ಚೌಕಾಕಾರದ
ರೂಪವನ್ನು ನೀಡಿದೆ.

ಆಕಾರದಲ್ಲಿಯ ಬದಲಾವಣೆಯಿಂದ
ಅಳತೆ ಕುಗ್ಗಿಲ್ಲ ಮತ್ತು
ಸುವಾಸನೆ ಬದಲಾಗಿಲ್ಲ.

★

ಮೈಸೂರು
ಸರಕಾರದ
ಸಾಬೂನು
ಕಾರ್ಖಾನೆ
ಬೆಂಗಳೂರು.

ಕೃಷಿ ಸಮೃದ್ಧಿಯೂ ನವಮನ್ವಂತರ

ಸತತವಾಗಿ ಎರಡು ವರ್ಷ ಅನಾವೃಷ್ಟಿ ಎದುರಿಸಿದ ನಂತರ ಇದೀಗ ಸಮೃದ್ಧಿ ಆಹಾರಧಾನ್ಯ ಬೆಳೆಗಳ ಹೊಸ ದಾಖಲೆ ನಿರ್ಮಿಸಿರುವ ಬೇತೋದಾರಿ ಹಂತಕ್ಕೆ ಏರಿದ್ದೇವೆ. ಇತ್ತೀಚಿನ ಹಿಂಗಾರು ಫಸಲಿನಲ್ಲಿ ಅಗಾಧ ಗೋಧಿ ಬೆಳೆ ತೆಗೆದು ಭಾರತದ ಕೃಷಿ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭಿಸಿದ್ದೇವೆ. ಕಳೆದ ೮ ವರ್ಷಗಳ ಹಿಂಗಾರು ಫಸಲಿನ ಸರಾಸರಿ 11 ದಶಲಕ್ಷ ಟನ್ನುಗಳಾಗಿತ್ತು. ಈ ವರ್ಷದ ಫಸಲು 16.5 ಹಶಲಕ್ಷ ಟನ್ನುಗಳೆಂದು ಅಂದಾಜು ಮಾಡಲಾಗಿದೆ. ಕಳೆದ ಮುಂಗಾರು ಫಸಲನ್ನೂ ಗಣನೆಗೆ ತೆಗೆದುಕೊಂಡರೆ 67–68 ನೇ ಸಾಲಿನ ಆಹಾರಧಾನ್ಯಗಳ ಬೆಳೆ 95 ದಶಲಕ್ಷ ಟನ್ನುಗಳೆಂದು ಅಂದಾಜು ಮಾಡಲಾಗಿದೆ.

—

ಟ್ಯಾಂಗ್ ಅಂದರೆ ಏನು ? ಇದನ್ನು ತಿಳಿದುಕೊಳ್ಳಲು ಪ್ರತಿಯೊಬ್ಬರೂ ಉತ್ಸುಕರಾಗುವುದು ಸಹಜ

ಟ್ಯಾಂಕು ಎಂದರೆ ಹೊಗೆಯಾಗುಳುವ ಒಂದು ಮಾರಕಾಸ್ತ್ರ : ಒಂದು ಬಲಿಷ್ಠ ವಾಹನ ಫಿರಂಗಿ ; ಸಮುಕಟ್ಟಾದ ಮುಂಚಾಚಿದ ಮೇಲೆ ಇದನ್ನು ಜೋಡಿಸಿರುತ್ತಾರೆ. ಟ್ಯಾಂಕಿನಲ್ಲಿ ಚಾಲಕರ ರಕ್ಷಣೆಗೆ ಸೂಕ್ತ ವ್ಯವಸ್ಥೆ ಇದೆ : ಸಣ್ಣ ಪುಟ್ಟ ಫಿರಂಗಿಗಳು ಹಾರಿಸುವ ಗುಂಡುಗಳು ಟ್ಯಾಂಕಿಗೆ ಏನೇನೂ ಮಾಡಲಾರವು. ಟ್ಯಾಂಕು ತಗ್ಗುದಿನ್ನೆಗಳಿರುವ ಪ್ರದೇಶದಲ್ಲೂ ನಿರಾತಂಕದಿಂದ ವೇಗವಾಗಿ ಚಲಿಸಬಲ್ಲದು. ಇಂದು ಟ್ಯಾಂಕುಗಳು ನದಿ–ಕೊಳ್ಳಗಳನ್ನು ಸುಲಭವಾಗಿ ಹಾಟಬಲ್ಲವು. ಟ್ಯಾಂಕುಗಳನ್ನು ವಿಮಾನದಲ್ಲಿ ಸಹಾ ಸಾಗಿಸಬಹುದಾಗಿದೆ, ಪ್ಯಾರಾಚೂಟ್ ಮೂಲಕ ಇಳಿಸಬಹುದಾಗಿದೆ. ಟ್ಯಾಂಕು ಚಾಲಕರು ಯಾವ ಕ್ಷಣದಲ್ಲಿ ಯಾವ ರೀತಿ ಸಾಹಸ ತೋರಿಸಬಹುದೆಂಬುದು ಯಾರಿಗೂ ಗೊತ್ತಾಗುವುದಿಲ್ಲ.

★

ಚಾಮರಾಜ ಮೊಹಲ್ಲ ತೆಲಿಗೆಮಾತರ ಸಂಘದ ಆಶ್ರಯದಲ್ಲಿ ಸಂಘದ ಅಧ್ಯಕ್ಷರಾದ ಡಾ|| ಎಂ. ನರಸಿಂಹಯ್ಯ ಪಂಡಿತರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ನಡೆಯಿತು.

— — ವ್ಯವಸಾಯ ಚಿತ್ರ — —